MYSORE LEGISLATIVE ASSEMBLY

FORTY-SEVENTH DAY

Thursday, 21st April 1955.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Hiduvali Banjar in Sorab Taluk.

Q.—879. Sri MALLIKARJUNAPPA GOWDA (Sorab—Shikaripur).—

Will the Government be pleased to state :—

(*a*) the extent of "Hiduvali Banjar" in the Sorab Taluk;

(*b*) of them the extent of wet, dry and garden lands ?

A.—Sri Kadidal MANJAPPA (Minister for Revenue and Public Works).—

(*a*) 54,039 acres.

(*b*) The information is not available.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಸ್ವಾಮಿ, ನನ್ನ (ಬ) ಪ್ರಶ್ನೆಗೆ ಉತ್ತರವಾಗಿ ವಿವರಗಳು ದೊರೆಯು ವಂತಿಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಈ ವಿವರಗಳು ಏಕೆ ದೊರೆಯಲಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಅಂಕಿಅಂಶಗಳನ್ನೆಲ್ಲಾ ಶೇಖರಣೆ ಮಾಡುವುದಕ್ಕೆ ಬಹಳ ಕಾಲ ಬೇಕಾಗುತ್ತದೆ. ಅದುದರಿಂದ ನಿಧಾನವಾಗುತ್ತದೆಂದು ಹೀಗೆ ಹೇಳಲಾಗಿದೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—54,039 ಎಕರೆ ಬಂಜರ್ ಭೂಮಿ ಇದೆಯೆಂದು ತಾವೇ ಉತ್ತರ ಕೊಟ್ಟಿದ್ದೀರಿ. ಹೀಗೆ ಇಷ್ಟೊಂದು ವಿಸ್ತೀರ್ಣದ ಜಮೀನು ಪಾಳು ಬಿದ್ದು ಹೋದರೆ ಇದರಿಂದ ದೇಶದ ಉತ್ಪನ್ನಕ್ಕೆ ಧಕ್ಕೆ ಬಂದು ಸರ್ಕಾರಕ್ಕೆ ಲುಕ್ಸಾನಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು; ತಾವು ಹೇಳತಕ್ಕದ್ದೂ ನಿಜ. ಆದರೆ ಸರ್ಕಾರದವರು ಸಹ ಈ ಹಿಂದೆಯೇ ಈ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡಿದ್ದಾರೆ. ಇಂಥಾದ್ದನ್ನೆಲ್ಲಾ ತಡೆಗಟ್ಟುವುದಕ್ಕಾಗಿಯೇ ಫ್ಯಾರೋ ಲ್ಯಾಂಡ್ ಆಕ್ಟ್‌ನ್ನು ಬೇರೆ ಜಾರಿಗೆ ತರಲಾಗಿದೆ. ಅದರ ಪ್ರಕಾರ ಈಗ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಆದಾಗ್ಯೂ ನಿರೀಕ್ಷಿಸಿದ್ದಷ್ಟು ಪ್ರಯೋಜನಗಳು ಕಂಡುಬರುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಹಾಗಾದರೆ ಇದನ್ನು ತಡೆಗಟ್ಟಲು ತಾವು ಮತ್ತೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಈ ಆಕ್ಟನ್ನೇ ಬದಲಾವಣೆ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆ.

Sri K. PUTTASWAMY.—In what aspect is the Fallow Land Act found inadequate to meet the situation ?

ಶ್ರೀ ಕಡಿದಾಳ್ ಮಂಜಪ್ಪ.—ಈಗಿರತಕ್ಕಂಥ ಆಕ್ಟ್ ಪ್ರಕಾರ ಅಂಥ ಜಮೀನುಗಳನ್ನು ಸರ್ಕಾರದವರೇ ತೆಗೆದುಕೊಳ್ಳಬೇಕೆಂದಿದೆ. ಹಾಗೆ ಸರ್ಕಾರದವರು ಆ ಜಮೀನುಗಳನ್ನು ತೆಗೆದುಕೊಂಡನಂತರ ಒಂದು ನೋಟೀಸನ್ನು ಹೊರಡಿಸಿದನಂತರ ಆಗ ಯಾರು ಮುಂದೆ ಬರುತ್ತಾರೋ ಅಂಥ ಗೇಣೀದಾರನಿಗೆ ಆ ಭೂಮಿಯನ್ನು ಹಂಗಾಮಿ ಸಾಗುವಳಿಗೆ ಕೊಡಬೇಕೆಂದಿದೆ. ಆದರೆ, ಸಾಮಾನ್ಯವಾಗಿ ರೈತರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಿ ಹಂಗಾಮಿ ವ್ಯವಸಾಯ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಹೀಗಾಗಿ ಆ ಜಮೀನುಗಳನ್ನು ಈಗ ಖಾಯಂ ಆಗಿಯೆ ವಿಲೇವಾರಿ ಮಾಡಬೇಕಾಗಿರುತ್ತದೆ. ಇಂಥ ತೊಂದರೆ ಇದೆ.

ಶ್ರೀ ಎಸ್. ಸಿದ್ದಪ್ಪ.—ಈಗ ತಾವು ಇಲ್ಲಿ ನೂಚಿಸಿರುವಂಥ 54 ಸಾವಿರ ಚಿಲ್ಲರೆ ಎಕರೆ ಬಂಜರ್ ಜಮೀನಿನಲ್ಲಿ ರೈತರು ತಮ್ಮ ದನಕರುಗಳಿಗೆ ಹುಲ್ಲುಗಾಗಿ ಬಿಟ್ಟುಕೊಂಡಿರುವಂಥ ಪ್ರದೇಶವನ್ನೂ ಸೇರಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಅವರ ದನಕರುಗಳಿಗೂ ಕೂಡ ಹೇರಳವಾಗಿ ಜಮೀನನ್ನು ಬಿಟ್ಟುಕೊಂಡಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಜನರಿಗೆ ಎಷ್ಟರಮಟ್ಟಿಗೆ ಅನುಕೂಲ ಮಾಡಬೇಕೋ ಅಷ್ಟೇ ಮಟ್ಟದಲ್ಲಿ ದನಕರುಗಳಿಗೂ ಅನುಕೂಲ ಮಾಡಬೇಕೆಂಬ ಮನೋಭಾವ ಸರ್ಕಾರದವರಿಗಿದೆಯೇ ? ಹಾಗಿದ್ದರೆ ಅವರ ದನಕರುಗಳಿಗೆ ಸಾಕಾಗುವಷ್ಟು ಭೂಮಿಯನ್ನು ರೈತರು ಬಂಜರ್ ಬಿಟ್ಟುಕೊಳ್ಳಲು ತಾವು ಅವಕಾಶ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟೆಷ್ಟು ರಾಸುಗಳಿಗೆ ಎಷ್ಟೆಷ್ಟು ಜಮೀನನ್ನು ಗೋಮಾಳದ ರೂಪದಲ್ಲಿ ಬಿಡಬೇಕೆಂದು ನಿರ್ಧರಮಾಡಲಾಗಿದೆಯೋ ಅಷ್ಟೇ ದಾಮಾಷದಲ್ಲಿ ಇಲ್ಲಿಯೂ ಒಂದು ಅವಕಾಶವಿರುವ ರೀತಿಯಲ್ಲಿ ಮುಂದೆ ಈ ಕಾನೂನನ್ನು ಬದಲಾವಣೆ ಮಾಡುವಾಗ ಸೇರಿಸಬೇಕೆಂದು ಆಲೋಚಿಸಿದ್ದೇವೆ.